ಒ ಎಸ್ 96/2019 ಪಿ.ಡಬ್ಲ್ಯೂ 1

ಇಂದು ದಿಃ 19.09.2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ ಜೆ ವಕೀಲರಿಂದಃ

ನನ್ನ ಗಂಡನ ಹುಷಾರಿಲ್ಲದ ಕಾರಣ ಮತ್ತುನಾನು ಹಿರಿಯ ನಾಗರಿಕಳಾದ ಕಾರಣ ನಾನು ಜಮೀನನ್ನು ರೇವಣ್ಣನಾಯಕ ಮತ್ತು ಇನ್ನೊಬ್ಬರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನೋಟಿಸ್ ಅನ್ನು ನಾನು ಕಳೆದ ಬಾರಿ ಕೊಡುತ್ತೇನೆ ಎಂದು ಹೇಳಿದ್ದೆ ಆದರೆ ಅದನ್ನು ತಂದಿಲ್ಲ ಆದರೆ ಅದನ್ನು ಕೊಡಬಹುದು. 3 ತಿಂಗಳ ವಾಯಿದೆ ಒಳಗೆ ಪುಟ್ಟಸ್ವಾಮಿಯವರಿಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಒಪ್ಪಿಗೆ ಮೇರೆಗೆ ಪುಟ್ಟಸ್ವಾಮಿ ಒಂದು ನೋಂದಾಯಿತ ಮತ್ತು ಇನ್ನೊಂದು ನೋಂದಾಯಿತವಲ್ಲದ ಕರಾರು ಪತ್ರ ಮಾಡಿದ್ದರು ಎಂದರೆ ಸರಿ, ಸಾಕ್ಷಿಯು ಮುಂದುವರಿದು ಸರ್ಕಾರಿ ಮಾರುಕಟ್ಟೆ ಮೌಲ್ಯದ ಪ್ರಕಾರ ಜಾಸ್ತಿಯಾಗುತ್ತದೆ ಎಂದು ಇನ್ನೊಂದು ಕರಾರು ಮಾಡಿದ್ದರು ಎಂದರೆ ಸರಿ. ಈ ವಿಚಾರವನ್ನು ನನ್ನ ವಾದಪತ್ರದಲ್ಲಿ ಪ್ರತಿವಾದಿ ಮೋಸ ಮಾಡಿದ್ದಾರೆ ಎಂದು ಬರೆಸಿದ್ದೇನೆ ಎಂದರೆ ಸರಿ. ಕರಾರು ಆದ ನಂತರದಲ್ಲಿ ಕ್ರಯಪತ್ರ ಮಾಡಿಕೊಟ್ಟಿಲ್ಲ ಎನ್ನುವುದು ಮೋಸ. ಆ ರೀತಿ 2 ಕರಾರು ಆಗಿರುವುದು ಮೋಸವಲ್ಲ. ಆ ಪೈಕಿ ಒಂದು ಕರಾರು ನನಗೆ ಮೋಸದಿಂದ ಬರೆದಿದ್ದಾರೆ ಎನ್ನುವುದು ತಪ್ಪು ಎಂದರೆ ಸರಿಯಲ್ಲ. ನನಗೆ ಮನೆ ಖರೀದಿಸುವ ಉದ್ದೇಶ ಇಲ್ಲದ ಕಾರಣ ಆ ರೀತಿಯ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ.

ನಾನು ಇದುವರೆಗೂ ಪ್ರತಿವಾದಿ ಒಪ್ಪಿಕೊಳ್ಳುವ ರೀತಿಯ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಒಂದಾನುವೇಳೆ ನಾನು 1 ನೇ ಪ್ರತಿವಾದಿಗೆ ಕಂದಾಯ ದಾಖಲೆ ಕೊಡುತ್ತಿದ್ದರೆ ಅವರು ಕ್ರಯದ ದಾಖಲೆ ಮಾಡಿಕೊಡುತ್ತಿದ್ದರು ನಾನು ಕೊಡದ ಕಾರಣ ಅವರು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಕರಾರಾದ ದಿನದಿಂದಲೂ 1 ನೇ ಪ್ರತಿವಾದಿ ಕ್ರಯಪತ್ರ ಮಾಡಿಕೊಡಲು ತಯಾರಿದ್ದರು ನಾನೇ ತಯಾರಿಲ್ಲ ಎಂದರೆ ಸರಿಯಲ್ಲ. ಕರಾರಿನಲ್ಲಿ ಬರೆದ 2 ನೇ ಪಾರದ ಷರತ್ತುಗಳನ್ನು ನಾನು ಪೂರೈಸಿಲ್ಲ ಎಂದರೆ ಸರಿಯಲ್ಲ, ನಾನು ಎಲ್ಲಾದಾಖಲೆಗಳನ್ನು ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಆ ಮನೆಗೆ ಹೋದ ನಂತರ ನನ್ನ ತಂಗಿಯ ಮಕ್ಕಳು ಬೇಡ ಎಂದು ಹೇಳಿದ ಕಾರಣ ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನಗೆ ಮಕ್ಕಳು ಇಲ್ಲದ ಕಾರಣ ನನ್ನ ತಂಗಿ ಮಕ್ಕಳ ಮಾತು ಕೇಳಿ ಕರಾರಿನ ಷರತ್ತುಗಳನ್ನು ಪೂರೈಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ನಂಜನಗೂಡು.